# ಜೂನ್ 2023

# ಸೇವಾ ವಾಣಿ






## ಸೇವಾ ಸಂಗಮ

## ಆರ್ಬಿಟ್



**ಪೂಜ್ಯ ರಾಬರ್ಟ್ ಮಿರಾಂದಾ**
**ಗುಲ್ಬರ್ಗ ಧರ್ಮಾಧ್ಯಕ್ಷರು**

**ಫಾ. ವಿಕ್ಟರ್ ವಾಸ್**
**ನಿರ್ದೇಶಕರು**

## ಆಶಾ ಕಾರ್ಯಕರ್ತೆಯರಿಗೆ ಮತ್ತು ಗ್ರಾಮಿಣ ಪುನರ್ವಸತಿ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ

ದಿನಾಂಕ 26.05.2023 ರಂದು ನಗರದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಆರೋಗ್ಯದ ಕುರಿತು ಆಶಾ ಕಾರ್ಯಕರ್ತೆಯರಿಗೆ ಮತ್ತು ಗ್ರಾಮಿಣ ಪುನರ್ವಸತಿ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ ಹಮ್ಮಿಕೊಳ್ಳಲಾಯಿತು. ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀ ಸಂತೋಷ ಎಪಿಡಿ ರವರು ಆಶಾ ಕಾರ್ಯಕರ್ತೆಯರಿಗೆ ಮತ್ತು ಗ್ರಾಮಿಣ ಪುನರ್ವಸತಿ ಕಾರ್ಯಕರ್ತರಿಗೆ ಚಟುವಟಿಕೆಯ ಮೂಲಕ ಮಾನಸಿಕ ಆರೋಗ್ಯ ಮತ್ತು ಮಾನಸಿಕ ಅಸ್ವಸ್ಥೆಯ ಕುರಿತು ಪತ್ತೆ ಹಚ್ಚುವುದು, ಚಿಕೀತ್ಸೆ ಕೋಡಿಸುವದು ಹಾಗು ಪ್ರಾಥಮಿಕ ಹಂತದಲ್ಲಿ ಆಪ್ತ ಸಮಾಲೋಚನೆ ಮಾಡುವ ಕೌಶಲ್ಯಗಳ ಕುರಿತು ವಿವರಿಸಿದರು. ಅರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೆಯ ವಿಕ್ಟರ್ ವಾಸ್ ಅವರು ತರಬೇತಿಯನ್ನು ಉದ್ದೆಶಿಸಿ ಮಾತನಾಡುತ್ತಾ ಆರ್ಬಿಟ್ ಸಂಸ್ಥೆಯು ಕಳೆದ ನಾಲ್ಕು ವರ್ಷದಿಂದ ಸುಮಾರು 320 ಮಾನಸಿಕ ಅಸ್ವಸ್ಥರನ್ನು ತಾಲೂಕಿನಲ್ಲಿ ಗುರುತಿಸಿ, ಜೀಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಸೂಕ್ತ ಉಚಿತ ಚಿಕಿತ್ಸೆ ನಿಡಲಾಗುತಿದೆ ಎಂದು ಸಂಸ್ಥೆಯು ಹೆಮ್ಮೆಯ ವಿಷಯವನ್ನು ವ್ಯಕ್ತಪಡಿಸಿದರು.





# ಮಕ್ಕಳ ಸಹಾಯವಾಣಿ 1098 ಕಾರ್ಯಕ್ರಮ



ದಿನಾಂಕ 02.05.2023 ರಂದು ಹುಮನಾಬಾದ ತಾಲೂಕಿನ ಕುಮಾರಚಿಂಚೋಳಿ ಗ್ರಾಮದಲ್ಲಿ ಬಾಲ್ಯ ವಿವಾಹಕ್ಕೆ ಒಳಗಾಗಿರುವ ಮಗುವಿಗೆ ಮಕ್ಕಳ ಸಹಾಯವಾಣಿ 1098 ಉಪಕೇಂದ್ರ ಆರ್ಬಿಟ್ ಸಂಸ್ಥೆ ಹುಮನಾಬಾದ ಇವರ ಸಂಯುಕ್ತಾಶ್ರಯದಲ್ಲಿ ರಕ್ಷಿಸಲಾಯಿರು, ಈ ಮಗು ಬಸವಕಲ್ಯಾಣ ತಾಲೂಕಿನ ಗಡಿರಾಯಪಲ್ಲಿ ಗ್ರಾಮದ ಸಂತೋಷ ಇವರ ಮಗಳಾದ ಕುಮಾರಿ ಸಪ್ನಾ ತಂದೆ ಸಂತೋಷ . ಈ ಪಾಲಕರಿಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ರ ಕುರಿತು ಮಾಹಿತಿ ನೀಡಿ ಗ್ರಾಮ ಪಂಚಾಯತ "ಅಭಿವೃದ್ಧಿ ಅಧಿಕಾರಿಗಳು, ಶಿಶುಅಭಿವೃದ್ಧಿ ಅದಿಕಾರಿಗಳು, ಪೋಲಿಸ್ ಇಲಾಖೆಯವರು ಹಾಗೂ ಮಕ್ಕಳ ಸಹಾಯ ವಾಣಿಯವರು ಕಾನೂನಿನ ಅರಿವು ಮೂಡಿಸಿ, ಬಾಲ್ಯ ವಿವಾಹಕ್ಕೆ ಒಳಗಾಗುತಿರುವ ಮಗುವಿಗೆ ರಕ್ಷಣೆ" ಮಗುವು ಹಿಂತಿರುಗಿ ಶಾಲೆಗೆ ಹೋಗಲು ಸಿದ್ದವಾಗಿದೆ. ಈ ಮಗುವು ಮಕ್ಕಳ ಸಹಾಯವಾಣಿ ಯವರಿರು ಹಾಗೂ ಆರ್ಬಿಟ್ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿರುತ್ತಾಳೆ.

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಅರಂಭಿಕ ಶಿಕ್ಷಣ ಕಾರ್ಯಕ್ರಮ

## ಎರಡು ದಿನದ ಸ್ಕ್ರಿನಿಂಗ್ ಮತ್ತು ಅಸ್ಸೆಸಮೇಂಟ್ ಕಾರ್ಯಕ್ರಮ



ದಿನಾಂಕ 30.05.2023 ದಿಂದ 31.05.2023 ರಂದು 2 ದಿನ ಸ್ಕ್ರಿನಿಂಗ್ ಮತ್ತು ಅಸ್ಸೆಸಮೆಂಟ್ ಕ್ಯಾಂಪ್ ಆರ್ಬಿಟ್ ಸಂಸ್ಥೆಯ ವತಿಯಿಂದ ಹುಮನಾಬಾದ ತಾಲೂಕಿನ ಸುತ್ತ ಮುತ್ತಲಿನ ಹಳ್ಳಿಗಳಲ್ಲಿರುವ 0–8 ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಸ್ಕ್ರಿನಿಂಗ್ ಮತ್ತು ಅಸ್ಸೆಸಮೇಂಟ್ ಕ್ಯಾಂಪ್ ಆರ್ಬಿಟ್ ಸಂಸ್ಥೆಯಲ್ಲಿ ಮತ್ತು ಹಳ್ಳಿಖೇಡ (ಬಿ) ಗ್ರಾಮದಲ್ಲಿ ನಡೆಸಲಾಯಿತ್ತು. 0–8 ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಉಚಿತ ಮೌಲ್ಯ ಮಾಪನ ಮಾಡಿ ಎಲ್ಲಾ ಮಕ್ಕಳ ಪೋಷಕರು ನಮ್ಮ ಮಕ್ಕಳ ಬೆಳವಣಿಗೆಗೆ ಶ್ರಮಿಸುತಿದ್ದಿರಿ ಎಂದು ಸಂತೋಷ ವ್ಯಕ್ತಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೇಯ ಫಾ. ವಿಕ್ಟರ್ ವಾಸ್, ಕಾರ್ಯಕ್ರಮದ ವ್ಯವಸ್ಥಾಪಕರು ಸಿಸ್ಟರ್. ವಿಲ್ಮಾ ಮ್ಯಾಥ್ಯೂ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು ಶ್ರೀ ಕುಪೆಂದ್ರ ಶಾಸ್ತ್ರಿ, ಎ.ಪಿ.ಡಿ ಸಂಸ್ಥೆಯ ಫಿಜೋತೆರೆಪಿಸ್ಟ್ ಶ್ರೀ ಬಸವರಾಜ, ಶೇಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಸಂಯೋಜಕಿ ಶ್ರೀಮತಿ ಮಮತಾ, ಕಾರ್ಯಕರ್ತೆ ಶ್ರೀಮತಿ ಕವಿತಾ ಹಾಗೂ ಸೂರ್ಯಕಾಂತ ರವರು ಭಾಗವಹಿಸಿದರು





## ಶ್ರೀಘ್ರ ಪತ್ತೆ ಹಚ್ಚುವಿಕ್ಕೆ ಮತ್ತು ಆರಂಭಿಕ ಶಿಕ್ಷಣದ ಜಾಗ್ರತಿ ಕಾರ್ಯಕ್ರಮ:




ದಿನಾಂಕ 08.05.2023 ರಂದು ಕನಕಟ್ಟಾ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಪೋಷಕರಿಗೆ ಮತ್ತು ಮಹಿಳೆಯರಿಗೆ ಜಾಗೃತಿ ಕಾರ್ಯಕ್ರಮ ನಡೆಸಲಾಗಿತ್ತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾರವರು ಮಕ್ಕಳಿಗೆ ಫೀಜೋಥೆರಫಿ ಮಾಡುವುದು, ಸ್ಪೀಚಥೇರಪಿ ಕೋಡುವುದರ ಮೂಲಕ ಮಕ್ಕಳಿಗೆ ಬದಲಾವಣೆಯ ಹಂತಕ್ಕೆ ತರಲು ಪ್ರಯತ್ನ ಪಡುತ್ತಿದ್ದೇವೆ ಮತ್ತು ಸರ್ಕಾರದಿಂದ ಸಿಗುವ ಸೌಲಭ್ಯಗಳು ಒದಗಿಸಿ ಕೋಡುತ್ತಿದ್ದೇವೆ. ಎಂದು ತಿಳಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ 12 ಜನ ಭಾಗವಹಿಸಿದರು.

# ಮಹಿಳಾಭಿವೃದ್ಧಿ ಕಾರ್ಯಕ್ರಮ





ದಿನಾಂಕ 29.05.2023 ರಂದು ಹುಡುಗಿ ಗ್ರಾಮದಲ್ಲಿರುವ ಆಯುರ್ವೇದ ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ ಹಾಗೂ ಡಾಕ್ಟರ್ ಸೈಲೆನ್ಸ್ ಆಸ್ಪತ್ರೆ ಗೋಲಖಾನ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರವು ಹಮ್ಮಿಕೋಳ್ಳಲಾಯಿತು. ಶಿಬಿರದ ಉದ್ಘಾಟಕರಾಗಿ ಆಗಮಿಸಿದ ಆಯುರ್ವೇದಿಕ್ ಆಸ್ಪತ್ರೆಯ ಡಾ. ಮೇನಕಾ  ಶಿಬಿರವನ್ನು ಉದ್ದೆಶಿಸಿ ಮಾತನಾಡುತ್ತಾ, ಕಣ್ಣು ಪ್ರತಿಯೋಬ್ಬರಿಗೆ ಬಹು ಮುಖ್ಯವಾಗಿದೆ ಕಣ್ಣು ಇಲ್ಲದೆ ಜೀವಿಸುವದು ಬಹಳ ಕಷ್ಟವಾಗುತ್ತದೆ. ನಾವು ಕಣ್ಣನ್ನು ನೀರ್ಲಕ್ಷಮಾಡದೆ ಕಣ್ಣಿನ ತೊಂದರೆ ಕಾಣಿಸಿಕೊಂಡ ಮರುದಿವಸವೇ ಆಸ್ಪತ್ರೆಗೆ ಹೋಗಿ ನಮ್ಮ ಕಣ್ಣನ್ನು ಸ್ಪರ್ಸನೆ ಮಾಡಿಸಿಕೋಡು ಕಣ್ಣಿನ ಆರೋಗ್ಯವನ್ನು ಕಾಪಾಡುವದು ನಮ್ಮ ಕರ್ತವ್ಯವಾಗಿದೆ, ಈ ಶಿಬಿರದಲ್ಲಿ ಗ್ರಾಮದ ಮುಖಂಡರಾದ ಪ್ರಭು ಮಾಲೆಯವರು ಮಾತನಾಡುತ್ತ, "ಆರ್ಬಿಟ್ ಸಂಸ್ಥೆಯು ಬಡವ ಶ್ರೀಮಂತ ಎನ್ನದೆ ಸೇವೆಯನ್ನು ಮಾಡುತಿದೆ ಈ ಸಂಸ್ಥೆಯ ಮೂಲಕ ಅನೇಕ ಹಳ್ಳಿಯಲ್ಲಿ ಇಂತಹ ಆರೋಗ್ಯ ಶಬಿರವನ್ನು ಏರ್ಪಡಿವುದರ ಮೂಲಕ ಜನರ ಆರೊಗ್ಯದ ಬಗ್ಗೆ ಹೆಚ್ಚನ ಕಾಳಜಿ ವಹಿಸುವಲ್ಲಿ ಮುಂದಾಗಿದೆ" ಎಂದು ಸಂಸ್ಥೆಯನ್ನು ಹೊಗಳಿ ತಮ್ಮ ಮಾತುಗಳನ್ನು ಮುಗಿಸಿದರು. ಈ ಶಿಬಿರದಲ್ಲಿ ಒಟ್ಟು 76 ಫಲಾನುಭವಿಗಳು ತಪಾಸಣೆ ಪಡೆದು ಅದರಲ್ಲಿ 17 ಫಲಾನುಭವಿಗಳು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ತಮ್ಮ ಕಣ್ಣಿನ ಆರೋಗ್ಯವನ್ನು ಕಾಪಾಡಿಕೋಳ್ಳಲು ಮುಂದಾಗಿದ್ದಾರೆ. ಈ ಶಿಬಿರದಲ್ಲಿ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಆರ್ಬಿಟ್ ಸಂಸ್ಥೆಯ ಸಿಸ್ಟರ್ ಎಡ್ನಾ ಹಾಗೂ ಸಿಬ್ಬಂದಿ ವರ್ಗದವರು ಹಾಗೂ ಗ್ರಾಮದ ಜನರು ಪಾಲಗೊಂಡು ಕಾರ್ಯಕ್ರಮವನ್ನು ಯಶಸ್ವಿಗೋಳ್ಳಿಸಿದರು.





# ನವಜೀವನ ಕಾರ್ಯಕ್ರಮ

## ಮಾನಸಿಕ ಅಸ್ವಸ್ಥರ ಪೋಷಕರಿಗಾಗಿ ಒಂದು ದಿನದ ತರಬೇತಿ ಕಾರ್ಯಕ್ರಮ



ದಿನಾಂಕ 25.05.2023 ರಂದು ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ರೋಗಿಯ ಪೋಷಕರಿಗೆ ಒಂದು ದಿನದ ತರಬೇತಿಯನ್ನು ಹುಮನಾಬಾದ ಪಟ್ಟಣದ ಆರ್ಬಿಟ್ ಸಂಸ್ಥೆಯಲ್ಲಿ ಹಮ್ಮಿಕ್ಕೊಳಲಾಗಿತ್ತು. ಕಾರ್ಯಕ್ರಮದಲ್ಲಿ ಒಟ್ಟು 51 ಜನ ಮಾನಸಿಕ ಅಸ್ವಸ್ಥರ ಪೋಷಕರು ಮತ್ತು 10 ಜನ ಸಿಬ್ಬಂದಿ ವರ್ಗಗದವರು ಸೇರಿ 61 ಜನ ಭಾಗವಹಿಸಿದರು. ತರಬೇತಿಗೆ ಉದ್ಘಾಟಕರಾಗಿ ಆಗಮಿಸಿದ ವಂದನೆಯ ಫಾ. ವಿಕ್ಟರ್ ವಾಸ್ ಅವರು ಮನೋಭಾವದಿಂದ ಕುಟುಂಬದಲ್ಲಿ ಮಾನಸಿಕ ಅಸ್ವಸ್ಥರನ್ನು ಗುಣಪಡಿಸಲು ಹಾಗೂ ಸಂತೋಷಭರಿತ ಜೀವನ ನಡೆಸಲು ಸಾಧ್ಯವೆಂದು ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ (APD) ಸಂಸ್ಥೆಯ ವಿಭಾಗಿಯ ವ್ಯವಸ್ಥಾಪಕರಾದ ಸಂತೋಷ ಅವರು ಮಾತನಾಡುತ್ತಾ ಮಾನಸಿಕ ಅಸ್ವಸ್ಥ ರೋಗವು ನಿವಾಸಿಯಾಗುವಂತಹ ರೋಗವಾಗಿದೆ, ಈ ರೋಗಕ್ಕೆ ಭಯಪಡಬೇಕಾಗಿಲ್ಲ ನಿರಂತರವಾಗಿ ಮಾತ್ರೆಗಳು ಸೇವನೆಯಿಂದ ಹತೋಟಿಗೆ ಬರುತ್ತದೆ ಎಂದು ವಿಸ್ವಾಸದ ಮಾತನ್ನು ಹೇಳಿ ಪೋಷಕರಲ್ಲಿ ಭರವಸೆ ತುಂಬಿಸಿದರು.

## ಸಿಬ್ಬಂದಿ ವರ್ಗದ ಕ್ಷೇತ್ರ ಆಧಾರಿತ ತರಬೇತಿ ಕಾರ್ಯಕ್ರಮ



ದಿನಾಂಕ 28.05.2023 ರಂದು ಆರ್ಬಿಟ್ ಹಾಗೂ ಅಜಿಂ ಪ್ರೇಮಜಿ ಫೌಂಡೇಶನ್ ಅವರ ನೇತ್ರತ್ವದಲ್ಲಿ ಮಾನಸಿಕ ಅಸ್ವಸ್ಥರ ಕಾರ್ಯಕರ್ತರಿಗೊಸ್ಕರ ಸಿಬ್ಬಂದಿ ವರ್ಗದ ಕ್ಷೇತ್ರ ಆಧಾರಿತ ತರಬೇತಿಯು ಹುಮನಾಬಾದ ತಾಲೂಕಿನ ವಿವಿಧ ಹಳ್ಳಿಗಳಲ್ಲಿ ಹಮ್ಮಿಕ್ಕೊಳಲಾಗಿತ್ತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ (APD) ಸಂಸ್ಥೆಯ ಡಿವಿಜನ್ ಮ್ಯಾನೇಜರ್ ಆದ ಸಂತೋಷ ಸರ ಅವರು ಆಗಮಿಸಿದ್ದರು. ಮೊದಲಿಗೆ ಓತಗಿ ಸೇಡೋಳ, ಚೀನಕೇರಾ ಹಾಗೂ ಮೋಳಕೇರ, ಗಡವಂತಿ ನಾಲ್ಕೂ ಹಳ್ಳಿಗಳು ಒಳಗೊಂಡು ಒಟ್ಟು 07 ಮಾನಸಿಕ ಅಸ್ವಸ್ಥರ ಮನೆ ಭೇಟಿ ನಿಡಿ ಆರೋಗ್ಯದ ಬಗ್ಗೆ ವಿಚಾರಿಸಿ ಸಿಬ್ಬಂದಿಗಳಿಗೆ ಮಾನಸಿಕ ಅಸ್ವಸ್ಥರ ಜೊತೆ ಹೆಗೆ ಮಾತನಾಡಬೇಕು ಮತ್ತು ಪೋಷಕರಿಗೆ ಯಾವ ಜವಬ್ದಾರಿಗಳನ್ನು ಕೊಡಬೇಕು, ಮತ್ತು ಕಾರ್ಯಕರ್ತರಾಗಿ ನಮ್ಮ ಕರ್ತವ್ಯ ಯಾವವು ಎಂದು ಸ್ಪಷ್ಟವಾಗಿ ತಿಳಿಸಿದರು. ಅದೇ ರಿತಿಯಾಗಿ ಮಾನಸಿಕ ಅಸ್ವಸ್ಥರ ಮನೆ ಭೆಟಿ ಸಮಯದಲ್ಲಿ ಔಷದಿಗಳ ಅವದಿಯು ದಿನಾಂಕವನ್ನು ಪರಿಕ್ಷಿಸಿ ಔಷದಿಗಳನ್ನು ಯಾವ ಸಮಯಕ್ಕೆ ಯಾವ ಔಷದಿ ಇದೆ ಎಂದು ಪಾಲಕರಿಗೆ ತಿಳಿಸಿ ಹೇಳಬೆಕು.



## ಮಾನಸಿಕ ಅಸ್ವಸ್ಥರ ಜಾಗ್ರತಿ ಕಾರ್ಯಕ್ರಮ




ದಿನಾಂಕ 18.05.2023 ರಂದು ಹುಮನಬಾದ ತಾಲೂಕಿನ ಸಿಂದಬಂದಗಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತರಿಗೆ ಮತ್ತು ಗ್ರಾಮದ ಮಹಿಳಾ ಸದಸ್ಯರಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗ್ರತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕರ್ತರಾದ ಶ್ರೀ ನೀಲಕಂಠ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮತನಾಡುತ್ತಾ ಮಾನಸಿಕ ಕಾಯಿಲೆ ಎಂದರೇನು, ಹೇಗೆ ಬರುತ್ತದೆ ಮತ್ತು ಮನಸಿಕ ಅಸ್ವಸ್ಥತೆಯ ಲಕ್ಷಣಗಳು ಯಾವವು ಮತ್ತು  ಮಾನಸಿಕ ಅಸ್ವಸ್ಥರನ್ನು ಹೇಗೆ ಪುನರ್ವಸತಿಗೆ ತರಬಹುದು ಎಂದು ಹೇಳಿದರು. ಹಾಗೆಯೆ ಮಾನಸಿಕ ಅಸ್ವಸ್ಥ ರೋಗಕ್ಕೆ ಹಳ್ಳಿಖೇಡ (ಬಿ) ಸರಕಾರಿ ಆಸ್ಪತ್ರೆಯಲ್ಲಿ ತಿಂಗಳ ನಾಲ್ಕನೇಯ ಶುಕ್ರವಾರ  ಉಚಿತ ಚಿಕಿತ್ಸೆ ಇದೆ ಎಂದು ಹೇಳಿದರು.

# ಯಶಸ್ವಿ ಕಥೆ



**ಹೆಸರು: ಪೂಜಾಶೀ**
**ಗಂಡ: ವೆಂಕಟ್**
**ವಯಸ್ಸು: 38**
**ಜಾತಿ: ಎಸ್ ಸಿ**
**ಗ್ರಾಮ: ನಮದಾಪೂರವಾಡಿ**

ಪೂಜಾಶ್ರೀ ಗಂಡ ವೆಂಕಟ ಇವರು ನಮದಾಪೂರವಾಡಿ ಗ್ರಾಮದ ನಿವಾಸಿಯಾಗಿದ್ದು ಇವರಿಗೆ 05 ಜನ ಮಕ್ಕಳಿದ್ದು ಗಂಡ ಆಟೊ ಚಾಲಕರಾಗಿದ್ದು ಬಂದ ಹಣದಿಂದ ಕುಟಂಬದ ಜವಾಬ್ದಾರಿಯನ್ನೂ ನಿಭಾಯಿಸುತ್ತಾರೆ. ಕಾಯಿಲೆಯ ಕಾರಣಗಳು ಗಂಡನ ಮೇಲೆ ಇರುವ ಸಂಶಯ ಕಾರಣದಿಂದಾಗಿ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದಾರೆ. ಇವರಿಗೆ ನಿದ್ದೆ ಬಾರದೆ ಇರುವುದು, ಏಕಾಂಗಿಯಾಗಿರುವುದು, ಅತಿಯಾದ ಸಿಟ್ಟಿನ ವರ್ತನೆ ಮತ್ತು ರಾತ್ರಿವಿಡಿ ಎಚ್ಚರ ಇರುವುದು ಅವರ ಲಕ್ಷಣವಾಗಿರುತ್ತದೆ. 2023 ರ ಜನೆವರಿ ತಿಂಗಳ ಮಾನಸಿಕ ಸರ್ವೆ ಮಾಡಲು ಇವರ ಮನೆ ಭೇಟಿ ನಿಡಿ ಇವರನ್ನು DMHP ಗೆ ಕರೆತಂದ್ದು ಮಾತ್ರೆಗಳನ್ನು ಒದಗಿಸಿಕೊಡಲಾಗಿದೆ ಸದ್ಯಕ್ಕೆ ಇವರು ಕಳೆದ 5 ತಿಂಗಳಿಂದ ನಿರಂತರವಾಗಿ ಮಾತ್ರೆಗಳನ್ನು ಸೇವಿಸುವುದರಿಂದ ಸಮಯಕ್ಕೆ ಸರಿಯಾಗಿ ನಿದ್ರೆ ಮಾಡುತ್ತಿದ್ದಾರೆ ಮತ್ತು ಸಿಟ್ಟಿನ ವರ್ತನೆಯಿಂದ ತಿರುವುಗೊಂಡು ಶಾಂತವಾಗಿ ಇರುತ್ತಿದ್ದಾರೆ.

# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ

ಮಲ್ಲಮ್ಮ ನುಡಿ
ಪ್ರಾದೇಶಿಕ ಕನ್ನಡ ದಿನ ಪತ್ರಿಕೆ

## ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಮುಂದಾಗಲು :ಫದರ್ ವಿಕ್ಟರ್‌ವಾಸ್ ಕರೆ



ಮಲ್ಲಮ್ಮ ನುಡಿ ವಾರ್ತೆ
ಹುಮನಾಬಾದ.

ಯಾವುದೋ ಒತ್ತಡಕ್ಕೆ ಸಿಲುಕಿ ಮಾನಸಿಕ ಅಸ್ವಸ್ಥರಾದವರು ಮಗುವಿನಂತಿರುತ್ತಾರೆ. ಅವರಿಗೆ ವಾಸ್ತವದ ಅರಿವು ಇರುವುದಿಲ್ಲ. ಅವರ ಬಗ್ಗೆ ಕೀಳರಿಮೆ ತಾಳದೇ, ಮುಖ್ಯವಾಹಿನಿಗೆ ಕರೆತರುವ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಆರ್ಬಿಟ್ ಸಂಸ್ಥೆ ಹಾಗೂ ಅಜಿಂ ಪ್ರೇಮಜಿ ಫೌಂಡೇಶನ್ ವತಿಯಿಂದ ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಹಾಗೂ ಮಾನಸಿಕ ಅಸ್ವಸ್ಥತೆಯ ಕುರಿತು ಪೋಷಕರಿಗೆ ಒಂದು ದಿನದ ತರಬೇತಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಫದರ್ ವಿಕ್ಟರ್‌ವಾಸ್ ಮಾತನ್ನಾಡುತ್ತಾ ನುಡಿದರು. ಕಾರ್ಯಕರ್ತರು ನಿಮ್ಮ ಮನೆಗಳಿಗೆ ಬಂದಾಗ ಸಹಕರಿಸಬೇಕು ಎಂದು ಕಿವಿಮಾತು ಹೇಳಿದರು. ವಿದ್ಯಾರ್ಥಿಗಳು ಮಾನಸಿಕ ಆರೋಗ್ಯದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ. ಮಾನಸಿಕ ಅಸ್ವಸ್ಥರು ಮೇಲು ನೋಟಕ್ಕೆ ಚೆನ್ನಾಗಿ ಕಂಡರೂ ಮಾನಸಿಕವಾಗಿ ಬಳಲಿರುತ್ತಾರೆ. ಅಂತಹವರಿಗೆ ಸ್ಥೈರ್ಯ ನೀಡುವ ಮೂಲಕ ಚಿಕಿತ್ಸೆ ನೀಡಿ ಗುಣ ಪಡಿಸಬೇಕು. ಪ್ರತಿ ದಿನ ನಮ್ಮ ಜೀವನವನ್ನು ಚಟುವಟಿಕೆಯಿಂದ ಇಡಬೇಕು. ವ್ಯಾಯಾಮ, ಶಿಸ್ತು, ಧ್ಯಾನದ ಮೂಲಕ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು ಎಂದು ಫದರ್ ವಿಕ್ಟರ್‌ವಾಸ್ ಸಲಹೆ ನೀಡಿದರು. ಸುತ್ತ ತ್ಯಾಗದ ಮನೋಭಾವದಿಂದ ಕುಟುಂಬದಲ್ಲಿ ಮಾನಸಿಕ ಅಸ್ವಸ್ಥರನ್ನು ಗುಣಪಡಿಸಲು ಹಾಗು ಸಂತೋಷ ಭರಿತ ಜೀವನ ನಡೆಸಲು ಸಾಧ್ಯವೆಂದು ತಿಳಿಸಿದರು. ಹುಮನಾಬಾದ ಹಾಗು ಚಿಟಗುಪ್ಪ ತಾಲೂಕಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ 320 ಜನ ಫಲಾನುಭವಿಗಳು ಇದ್ದಾರೆ ಅನೇಕರು ಚಿಕಿತ್ಸೆಯನ್ನು ಪಡೆದು ಗುಣಮುಖರಾಗಿ ಕುಟುಂಬದಲ್ಲಿ ಸಂತೋಷವಾಗಿ ಜೀವನ ನಡೆಸುತಿದ್ದಾರೆ ಎಂದು ತಿಳಿಸಿದರು. ಮೇ.25ರಂದು ಹುಮನಾಬಾದ ನಗರದ ಹೊರವಲಯದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ, ಆರ್ಬಿಟ್ ಸಂಸ್ಥೆ ಹಾಗು ಅಜಿಂ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮಕ್ಕೆ ಸಂಬಧಿಸಿದಂತೆ ಮಾನಸಿಕ ಅಸ್ವಸ್ಥತೆಯ ಕುರಿತು ಪೋಷಕರಿಗೆ ಒಂದು ದಿನದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ಸಂತೋಷ ರವರು ಆಗಮಿಸಿರುವ ಪೋಷಕರನ್ನುದ್ದೇಶಿಸಿ ಮಾತನ್ನಾಡುತ್ತ ಮಾನಸಿಕ ಅಸ್ವಸ್ಥತೆ ನಿರಂತರ ಮಾತ್ರೆಗಳ ಸೇವನೆಯಿಂದ ಹತೋಟಿಗೆ ಬರುವ ಕಾಯಿಲೆ ಆಗಿರುತ್ತದೆ. ಮಾನಸಿಕ ಅಸ್ವಸ್ಥರು ಸಮಾಜಕ್ಕೆ ಹೊರೆ ಎಂದು ಭಾವಿಸದೆ ನಮ್ಮಂತೆಯೇ ಪ್ರೀತಿ, ನಂಬಿಕೆ, ಸಹನೆಯಿಂದ ನೋಡಿಕೊಂಡರೆ ಈ ಕಾಯಿಲೆಯಿಂದ ಸ್ವಸ್ಥರಾಗಬಹುದು. ಮಾನಸಿಕ ಅಸ್ವಸ್ಥರಿಗೆ ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ನೀಡಬೇಕು. ಮನುಷ್ಯನ ದೇಹಕ್ಕೆ ಪೆಟ್ಟಾದಾಗ ಗುರುತಿಸಲು ಸಾಧ್ಯ ಆದರೆ ಮೆದುಳಿನ ಕಾಯಿಲೆ (ಮಾನಸಿಕ ಕಾಯಿಲೆ) ಗುರುತಿಸಲು ಸುಲಭವಲ್ಲ ಎಂದು ತಿಳಿಸಿದರು. ತರಬೇತಿಯಲ್ಲಿ ಭಾಗವಹಿಸಿದ ಜನರು ಸಂಪನ್ಮೂಲ ವ್ಯಕ್ತಿಗೆ ತರತರಹದ ಪ್ರಶ್ನೆಗಳನ್ನು ಕೇಳಿ ಇದಕ್ಕೆ ತಕ್ಕ ಉತ್ತರ ಪಡೆದುಕೊಂಡರು. ಈ ತರಬೇತಿಯಲ್ಲಿ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು. ಪ್ರಾರ್ಥನೆ ನೀಲಕಂಠ ಮಾಡಿದರು. ಅರುಣಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯನಿರುಪಣೆ ಶ್ರೀಮತಿ ಕವಿತಾ ಮಾಡಿದರು. ಹನುಮಂತ ಕೊನೆಯಲ್ಲಿ ವಂದಿಸಿದರು.

## ಮಾನಸಿಕ ಅಸ್ವಸ್ಥರು ಸಮಾಜಕ್ಕೆ ಹೊರೆ ಭಾವಿಸದೆ ನಮ್ಮಂತೆಯೇ ಪ್ರೀತಿ, ನಂಬಿಕೆ, ಸಹನೆಯಿಂದ ನೋಡಿಕೊಳ್ಳಬೇಕು - ಸಂತೋಷ

ಪ್ರಜಾ ಪ್ರಸಿದ್ಧ ವಾರ್ತೆ
ಹುಮನಾಬಾದ್,ಮೇ.26-

ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ರೋಗಿಯ ಪೋಷಕರಿಗೆ ಒಂದು ದಿನದ ತರಬೇತಿ.



ಮಾನಸಿಕ ಅಸ್ವಸ್ಥತೆಯ ಕುರಿತು ಪೋಷಕರಿಗೆ ಒಂದು ದಿನದ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಆರ್ಬಿಟ್ ನಿರ್ದೇಶಕರು ಫಾದರ್ ವಿಕ್ಟರ್ ಮನೋಭಾವಥದಿಂದ ಕುಟುಂಬದಲ್ಲಿ ಮಾನಸಿಕ ಅಸ್ವಸ್ಥರನ್ನು ಗುಣಪಡಿಸಲು ಹಾಗು ಸಂತೋಷ ಭರಿತ ಜೀವನ ನಡೆಸಲು ಸಾಧ್ಯವೇಂದು ತಿಳಿಸಿದರು.

ಆರ್ಬಿಟ್ ಸಂಸ್ಥೆ ಹಾಗೂ ಅಜಿಂ ಪ್ರೇಮಜಿ ಫೌಂಡೇಶನ್ ವತಿಯಿಂದ ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ನಮ್ಮ ಕಾರ್ಯಕರ್ತರು ನಿಮ್ಮ ಮನೆಗಳಿಗೆ ಬಂದಾಗ ಸಹಕರಿಸಬೇಕು ಎಂದು ಕಿವಿಮಾತು ಹೇಳಿದರು.

ಹುಮನಾಬಾದ ಹಾಗು ಚಿಟಗುಪ್ಪ ತಾಲೂಕಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ 320 ಜನ ಫಲಾನುಭವಿಗಳು ಇದ್ದಾರೆ ಅನೇಕರು ಚಿಕಿತ್ಸೆಯನ್ನು ಪಡೆದು ಗುಣಮುಖರಾಗಿ ಕುಟುಂಬದಲ್ಲಿ ಸಂತೋಷವಾಗಿ ಜೀವನ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಸಂತೋಷರವರು ಪೋಷಕರನ್ನುದ್ದೇಶಿಸಿ ಮಾತನ್ನಾಡುತ್ತ ಮಾನಸಿಕ ಅಸ್ವಸ್ಥತೆ ನಿರಂತರ ಮಾತ್ರೆಗಳ ಸೇವನೆಯಿಂದ ಹತೋಟಿಗೆ ಬರುವ ಕಾಯಿಲೆ ಆಗಿರುತ್ತದೆ.

ಮಾನಸಿಕ ಅಸ್ವಸ್ಥರು ಸಮಾಜಕ್ಕೆ ಹೊರೆ ಎಂದು ಭಾವಿಸದೆ ನಮ್ಮಂತೆಯೇ ಪ್ರೀತಿ, ನಂಬಿಕೆ, ಸಹನೆಯಿಂದ ನೋಡಿಕೊಂಡರೆ ಈ ಕಾಯಿಲೆಯಿಂದ ಸ್ವಸ್ಥರಾಗಬಹುದು. ಮಾನಸಿಕ ಅಸ್ವಸ್ಥರಿಗೆ ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ನೀಡಬೇಕು. ಮನುಷ್ಯನ ದೇಹಕ್ಕೆ ಪೆಟ್ಟಾದಾಗ ಗುರುತಿಸಲು ಸಾಧ್ಯ ಆದರೆ ಮೆದುಳಿನ ಕಾಯಿಲೆ (ಮಾನಸಿಕ ಕಾಯಿಲೆ) ಗುರುತಿಸಲು ಸುಲಭವಲ್ಲ ಎಂದು ತಿಳಿಸಿದರು.

ತರಬೇತಿಯಲ್ಲಿ ಭಾಗವಹಿಸಿದ ಜನರು ಸಂಪನ್ಮೂಲ ವ್ಯಕ್ತಿಗೆ ತರತರಹದ ಪ್ರಶ್ನೆಗಳನ್ನು ಕೇಳಿ ಇದಕ್ಕೆ ತಕ್ಕ ಉತ್ತರ ಪಡೆದುಕೊಂಡರು.

ಪ್ರಾರ್ಥನೆ ನೀಲಕಂಠ, ಪ್ರಾಸ್ತವಿಕನುಡಿ ಅರುಣಕುಮಾರ, ಕಾರ್ಯನಿರೂಪಣೆ ಕವಿತಾ, ವಂದನಾರ್ಪಣೆ ಹನುಮಂತ ಮಾಡಿದರು.

ಈ ತರಬೇತಿಯಲ್ಲಿ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಆರೋಗ್ಯ ಶಿಬಿರದಿಂದ ಬಡಬಗ್ಗರಿಗೆ ಅನುಕೂಲ

ಭಾರತ ವೈಭವ: ಸಚೀಶ ಲಂಬುನೋರ್



ಹುಮನಾಬಾದ: ದಿನಾಂಕ 29-5-2023 ಸೋಮುವಾರದಂದು ಸಾಲಿನ್ಸ್ ಆಸ್ಪತ್ರೆ ಬೀದರ ಹಾಗೂ ಆರ್ಬಿಟ್ ಸಂಸ್ಥೆ ಹುಮ್ನಾಬಾದ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕಣ್ಣಿನ ಆರೋಗ್ಯ ತಪಾಸಣೆ ಶಿಬಿರವನ್ನು ತಾಲೂಕಿನ ಹುಡಗಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿ-ತ್ತು. ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಪ್ರಭು ಮಾಲೆ ಮಾತನಾಡಿ,ಆರ್ಬಿಟ್ ಸಂಸ್ಥೆಯವರು ಇಂತಹ ಕಾರ್ಯಕ್ರಮ ಮಾಡುವುದರಿಂದ ನಮ್ಮ ಗ್ರಾಮದ ಜನರಿಗೆ ತುಂಬಾ ಉಪಯೋಗವಾಗುತ್ತಿದೆ.ಉಚಿತ ತಪಾಸಣೆ ಇರುವುದ-ರಿಂದ ಬಡವರಿಗೆ ಹೆಚ್ಚೇಚ್ಚಾಗಿ ಅನುಕೂಲವಾಗಲಿದೆ, ಇದರ ಸದುಪಯೋಗ ಗ್ರಾಮದವರು ಪಡೆದು ಕೊಳ್ಳಬೇಕು. ಜೊತೆಗೆ ಇತರರಿಗೂ ಸಹ ಇದರ ಉಪಯೋಗವನ್ನು ಪಡೆದುಕೊಳ್ಳುಲು ತಿಳಿಸಬೇಕು. ಸಂಸ್ಥೆಯವರು ಜನರ ಏಳಿಗೆಗಾಗಿ ಸುಮಾರು ವರ್ಷಗಳಿಂದ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿರುವುದನ್ನು ನೋಡಿದರೆ ನಿಸ್ವಾರ್ಥ ಸೇವೆಗೆ ಆರ್ಬಿಟ್ ಸಂಸ್ಥೆ ಹೆಸರು ವಾಸಿಯಾಗಿದೆ ಎಂದು ಅಭಿಮತ ಪಟ್ಟರು. ಕಾರ್ಯಕ್ರಮದಲ್ಲಿ ಸಿಸ್ಟರ್ ಇದೆನ್,ಸೈಲೆನ್ಸ್ ಆಸ್ಪತ್ರೆಯ ಪ್ರದೀಪ,ಪ್ರಕಾಶ ಆಯುರ್ವೇದಿಕ ಆಸ್ಪತ್ರೆಯ ಡಾ.ಮೀನಾ ಗ್ರಾಮ ಪಂಚಾಯತ ಸದಸ್ಯರಾದ ಗುಂಡಪ್ಪ ಮಹಿಳಾಭಿವೃದ್ಧಿ ಕಾರ್ಯಕ್ರಮದ ಕಾರ್ಯ ಕರ್ತರಾದ ಸವಿತಾ,ಶ್ರೀಮತಿ ಅಮಿತಾ,ರೀಟಾ ಸೇರಿ ಗ್ರಾಮಸ್ಥರು ಉಪಸ್ಥಿತರಿದ್ದರು.

## ಮಾನಸಿಕ ಅಸ್ವಸ್ಥತೆ ರೋಗಿಯ ಪೋಷಕರಿಗೆ ಒಂದು ದಿನದ ತರಬೇತಿ



# ಸೇವಾ ಸಂಗಮ ಸಂಸ್ಥೆ ಕಲಬುರಗಿ ಕಾರ್ಯಕ್ರಮ

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ



### "ಬಾಲ್ಯ ವಿವಾಹದ ನೀಷೇದ ಕುರಿತು ಅರಿವು ಕಾರ್ಯಕ್ರಮ"

ದಿನಾಂಕ 27–05–23 ರಂದು ಸೇವಾ ಸಂಗಮ ಸಂಸ್ಥೆಯು ಕಲಬುರಗಿ ನಗರದ ಬಸವೇಶ್ವರ ಕಾಲೋನಿಯಲ್ಲಿ ಮಹಿಳೆಯರಿಗೆ ಬಾಲ್ಯ ವಿವಾದ ಬಗ್ಗೆ ಅರಿವು ಕಾರ್ಯಕ್ರಮ ಮಾಡಲಾಯಿತ್ತು. 18 ವರ್ಷದ ವಯಸ್ಸಿನ ಕೆಳಗಿರುವ ಯಾವುದೇ ಹೆಣ್ಣು ಮತ್ತು 21 ವಯಸ್ಸಿನ ಕೆಳಗಿನ ಗಂಡು ಮಕ್ಕಳ ಮದುವೆ ನಡೆಯುತ್ತಿದ್ದರೆ ಹತ್ತಿರ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರಿಗೆ ಮತ್ತು ಹತ್ತಿರದ ಪೊಲೀಸ್ ಸ್ಟೇಷನಗೆ ದೂರು ನೀಡಬೇಕು. ಬಾಲ್ಯ ವಿವಾಹ ಮಾಡುವುದು ಕಾನೂನಿನ ಪ್ರಕಾರ ಅಪರಾಧ 1978ರ ಕಾಯ್ದೆ ಪ್ರಕಾರ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಬಾಲ್ಯ ವಿವಾಹದಿಂದ ಹೆಣ್ಣು ಮಗು ಸಾಮಾಜಿಕವಾಗಿ, ಬೌದ್ಧಿಕವಾಗಿ. ಮಾನಸಿಕವಾಗಿ, ಹಾಗೂ ದೈಹಿಕವಾಗಿ ಸದೃಢರಾಗಿರುವುದಿಲ್ಲ, ಅವಳು ಗರ್ಭ ಧರಿಸಿದಾಗ ಹಲವಾರು ಸಮಸ್ಯೆಗೆ ತುತ್ತಾಗುತ್ತಾಳೆ ಅಥವಾ ವಿಕಲಚೇತನ ಮಕ್ಕಳು ಜನಿಸಬಹುದು. ಹೆಣ್ಣು ಮಾನಸಿಕ ದೌರ್ಬಲ್ಯತೆಗೆ ಒಳಗಾಗಿ ಖಿನ್ನತೆಯನ್ನು ಅನುಭವಿಸುತ್ತಾಳೆ ಆದ್ದರಿಂದ ಬಾಲ್ಯವಿವಾಹವನ್ನು ತಡೆಗಟ್ಟಿ ಹೆಣ್ಣು ಮಕ್ಕಳ ಬಾಳು ಬೆಳಕಾಗಬೇಕು. ಬಾಲ್ಯ ವಿವಾಹ ತಡೆಯುವುದು ಇದು ನಮ್ಮೆಲರ ಜಾವಾಬ್ದಾರಿಯಾಗಿದೆ.

### ಬೆಳವಣಿಗೆ ಕುಂಠಿತ ಮಕ್ಕಳಿಗಿರುವ ಸೌಲಭ್ಯ ಕುರಿತು ಮಾಹಿತಿ ಕಾರ್ಯಕ್ರಮ:



ದಿನಾಂಕ 12–05–2023 ರಂದು ಕಲಬುರಗಿ ನಗರದ ಬಂಡೇಮ್ಮ ಮೈದಾನ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮೊದಲಿಗೆ ಸೇವಾ ಸಂಗಮ ಸಂಸ್ಥೆ ಕಳೆದ 17 ವರ್ಷಗಳಿಂದ ಬಡವರಿಗಾಗಿ, ಮಹಿಳೆಯರಿಗಾಗಿ, ಅಪೌಷ್ಟಿಕ ಮಕ್ಕಳಿಗೋಸ್ಕರ, ರೈತರಿಗಾಗಿ, ಬೆಳವಣಿಗೆ ಕುಂಠಿತವಿರುವ ಮಕ್ಕಳೊಂದಿಗೆ ಸಮಾಜ ಸೇವೆ ಮಾಡುತ್ತಿದೆ. ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಪೌಂಡೇಶನ್ ಜೊತೆಗೂಡಿ ಬೆಳವಣಿಗೆಯಲ್ಲಿ ನ್ಯೂನ್ಯತೆ ಹೊಂದಿದ ಮಕ್ಕಳ ಜೊತೆ ಕಾರ್ಯನಿರ್ವಹಿಸುತ್ತಿದ್ದು, ಆ ಮಕ್ಕಳನ್ನು ಸರ್ವೆ ಮಾಡುವುದರ ಮೂಲಕ ಗುರುತಿಸಿ ಮಕ್ಕಳಿಗೆ ಅವಶ್ಯಕತೆಯಿರುವ ಸಾಧನಾ ಸಲಕರಣೆ ಮತ್ತು ಫಿಜೀಯೋಥೇರಪಿ ನೀಡುವುದರ ಮೂಲಕ ಮಕ್ಕಳಲ್ಲಿರುವ ನ್ಯೂನ್ಯತೆಯನ್ನು ಕಡಿಮೆ ಮಾಡಬಹುದೆಂದು ತಿಳಿಸಲಾಯಿತು. ನಿಮ್ಮ ಗಮನದಲ್ಲಿ ಈ ತರಹದ ಯಾವುದೆ ಮಕ್ಕಳು ನಿಮ್ಮ ಸಮುದಾಯದಲ್ಲಿ ಕಂಡುಬಂದರೆ ಸೇವಾ ಸಂಗಮ ಸಂಸ್ಥೆಗೆ ತಿಳಿಸಲು ಹೇಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 11 ಜನ ಭಾಗವಹಿಸಿದರು

### ಆರ್.ಟಿ.ಇ ಬಗ್ಗೆ ಮಾಹಿತಿ ಕಾರ್ಯಕ್ರಮ:



ದಿನಾಂಕ 11.05.2023 ರಂದು ಕಲಬುರಗಿ ತಾಲ್ಲೂಕಿನ ಸಿತನೂರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ ಉಚಿತ ಶಿಕ್ಷಣದ ಹಕ್ಕು ಕುರಿತು ಅರಿವು ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಗಿತ್ತು. 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ 1 ರಿಂದ 8ನೇ ತರಗತಿಯ ಮಕ್ಕಳು ಶಾಲೆಯಿಂದ ಹೊರಗೆ ಉಳಿದಿರುವ ಮಕ್ಕಳಿಗೆ ಅವರ ವಯಸ್ಸಿಗೆ ಅನುಗುಣವಾಗಿ ಯಾವ ತರಗತಿಗೆ ಸೇರಿಸಬಹುದೆಂದು ಖಾಸಗಿ ಶಾಲೆಯಲ್ಲಿ ಬಡ ಮಕ್ಕಳಿಗೆ 25% ರಷ್ಟು ಮೀಸಲಿದೆ ಶಾಲೆಗೆ ಸೇರುವ ಮಕ್ಕಳ ಶುಲ್ಕವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸುತ್ತದೆ. ಯಾವುದೇ ಮಗು ಶಾಲೆಯಿಂದ ಹೋರಗೆ ಉಳಿಯದಂತೆ ಪ್ರತಿಯೋಬ್ಬರು ಸಮುದಾಯದಲ್ಲಿ ಕಾಳಜಿವಹಿಸಿ ಮಕ್ಕಳಿಗೆ ಶಾಲೆಯಲ್ಲಿ ದಾಖಲಾತಿ ಮಾಡಿಸಬೇಕು. ಶಿಕ್ಷಣ ಪ್ರತಿಯೊಬ್ಬರ ಹಕ್ಕಾಗಿದೆ ಎಂದು ತಿಳಿಸಿದರು.

## “ಸದೃಢ ಆರೋಗ್ಯಕ್ಕೆ ಪೌಷ್ಠಿಕ ಆಹಾರ”



ದಿನಾಂಕ 09–05–2023 ರಂದು ಶಾಂತಿ ನಗರದಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಪೌಷ್ಠಿಕ ಆಹಾರದ ಬಗ್ಗೆ ಮಾಹಿತಿ ಕಾರ್ಯಕ್ರಮ ಮಾಡಲಾಯಿತು. ಮನುಷ್ಯನ ಮೂಲಭೂತ ಅಗತ್ಯೆಗಳಲ್ಲಿ ಆಹಾರವು ಒಂದು ನಾವು ಬದಕಲು ಆಹಾರ ಬಹುಮುಖ್ಯ ಆದರೆ ನಾವು ಎಂತಹ ಆಹಾರವನ್ನು ಯಾವಾಗ ಎಷ್ಟು ಪ್ರಮಾಣದಲ್ಲಿ ಸೇವಿಸಬೇಕೆಂಬುವುದು ಬಹುಮುಖ್ಯ ಆಹಾರದಲ್ಲಿ ಉತ್ತಮ ಸತ್ವವಿರುವಂತಹ ಪೌಷ್ಠಿಕ ಆಹಾರವನ್ನು ಸೇವಿಸಬೇಕು. ನಮ್ಮ ಆರೋಗ್ಯಕ್ಕೆ ಹವಾಮಾನಕ್ಕೂ ಹತ್ತಿರವಾದ ಸಂಬಂಧವಿದೆ ಅದಕ್ಕೆ ತಕ್ಕಂತೆ ನಮ್ಮ ಆಹಾರ ವ್ಯವಸ್ಥೆಯನ್ನು ಹೊಂದಿಕೊಳ್ಳಬೆಕೆಂದು ಅಂಗನವಾಡಿ ಕಾರ್ಯಕರ್ತೆ ರುಕ್ಮೀಣಿ ಅವರು ತಿಳಿಸಿದರು. ಶಿವಕಾಂತರವರು ಕೈತೋಟದ ಬಗ್ಗೆ ಮಾಹಿತಿ ತಿಳಿಸುತ್ತಾ. ನಮ್ಮ ಮನೆಯ ಖಾಲಿ ಸ್ಥಳದಲ್ಲಿ ನಾವು ಕೈತೋಟವನ್ನು ನಿರ್ಮಿಸಿಕೊಳ್ಳಬೇಕು.



ದಿನಾಂಕ 18.05.2023 ರಂದು ಕಲಬುರಗಿ ನಗರದ ಚೇತನ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಅಸ್ಸೆಸಮೆಂಟ್ ಕ್ಯಾಂಪ್ ಹಮ್ಮಿಕೊಳ್ಳಲಾಯಿತು. 0–6 ವರ್ಷದ ಮಕ್ಕಳ ಬೆಳವಣಿಗೆ ಕುಂಠಿತವಿರುವ ಮಕ್ಕಳನ್ನು ಗುರುತಿಸಿ ನಾವು ಗುರುತಿಸಿದಂತಹ ಮಕ್ಕಳನ್ನು ಅಸ್ಸೆಸಮೆಂಟ್ ಮಾಡಿ ಆ ಮಕ್ಕಳಿಗೆ ಬೇಕಾದಂತಹ ಸಾಧನಾ ಮತ್ತು ಸಲಕರಣೆಯನ್ನು ಕೊಟ್ಟು ಆ ಮಕ್ಕಳ ಬೆಳವಣಿಗೆ ಸುಧಾರಣೆ ಮಾಡುವಂತಹ ಕೆಲಸದಲ್ಲಿ ಸೇವಾ ಸಂಗಮ ಸಂಸ್ಥೆ ಒಂದು ಒಳ್ಳೆಯ ಕಾರ್ಯದಲ್ಲಿ ತೋಡಗಿದೆ ಎಂದು ಹೇಳಬಹುದು. ಹುಸೇನ್‌ರವರು ಬೆಳವಣಿಗೆ ಕುಂಠಿತವಿರುವ ಮಕ್ಕಳು ಯಾವ ಹಂತದಲ್ಲಿದ್ದಾರೆ ಮತ್ತು ಅವರಿಗೆ ಯಾವ ಚಟುವಟಿಕೆ ನೀಡಬೇಕು ಎಂಬುವುದರ ಮೂಲಕ ಮಕ್ಕಳಲ್ಲಿರುವ ನ್ಯೂನ್ಯತೆಯನ್ನು ಕಡಿಮೆ ಮಾಡಬಹುದೆಂದು ತಿಳಿಸಿದರು.

## “ಬೆಳವಣಿಗೆ ಕುಂಠಿತವಿರುವ ಮಕ್ಕಳಿಗೆ ಬೆಂಬಲ ನೀಡುವ ಕರೆ”



ಸೇವಾ ಸಂಗಮ ಸಮಾಜ ಸಂಸ್ಥೆ ಕಲಬುರಗಿ ಹಾಗೂ ಗ್ರಾಮೀಣ ಭಾಗದಲ್ಲಿ ಕಳೆದ 17 ವರ್ಷಗಳಿಂದ ಮಹಿಳೆಯರಿಗಾಗಿ, ವಿಕಲಚೇತನರಿಗಾಗಿ. ಅಪೌಷ್ಠಿಕ ಮಕ್ಕಳ ಸಣ್ಣ ರೈತರು, ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಇತ್ತಿಚಿನ ದಿನಗಳಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳು ಹೆಚ್ಚಾಗಿ ಕಂಡು ಬರುತ್ತಿವೆ ಎಂದು ಶೀಘ್ರ ಪತ್ತೆ ಹಚ್ಚುವಿಕೆ ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕುರಿತು ಸದಸ್ಯರಾದ ಆನಂದರವರು ಈ ಕಾರ್ಯಕ್ರಮದಲ್ಲಿ ತಿಳಿಸಿದರು. ಕಾವಲಗಾ ಬಿ. ಗ್ರಾಮದ ಜನರು ಈ ಕಾರ್ಯಕ್ರಮದ ಲಾಭ ಪಡೆಯಬೇಕು ಎಂದು ತಿಳಿಸಿದರು. ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಸಾಮಾನ್ಯ ಮಕ್ಕಳೊಂದಿಗೆ ಬೆರೆಯಲೂ ಬಿಡಬೇಕು ಹಾಗೆ ಪಾಲಕರು ಮಕ್ಕಳಿಗೆ ಹೆಚ್ಚಿನ ಸಮಯವನ್ನು ಕೂಡಬೇಕು ಎಂದು ಈ ಕಾರ್ಯಕ್ರಮದಲ್ಲಿ ತಿಳಿಸಿದರು.



ಕಲಬುರಗಿಯ ನಗರದ ಚೇತನ ಶ್ರೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಮಕ್ಕಳ ಅಸ್ಸೆಸಮೆಂಟ್ ಕ್ಯಾಂಪ್ ಹಮ್ಮೀಕೊಳ್ಳಲಾಯಿತು. 0–6 ವರ್ಷದ ಮಕ್ಕಳಿಗೆ ಬೆಳವಣಿಗೆ ಕುಂಠಿತವಿರುವ ಮಕ್ಕಳನ್ನು ಗುರುತಿಸಿ, ಯಾವ ಮಕ್ಕಳಿಗೆ ಅಸ್ಸೆಸಮೆಂಟ್ ಮಾಡಬೇಕು ಅಸ್ಸೆಸಮೆಂಟ್ ಮಾಡಿ ಆ ಮಕ್ಕಳಿಗೆ ಬೇಕಾದಂತಹ ಚಟುವಟಿಕೆ ನೀಡುವುದರ ಮೂಲಕ ಮಗುವಿನಲ್ಲಿ ಸುಧಾರಣೆ ತರಬಹುದು. ಹಾಗೂ ನಮ್ಮ ಜೊತೆ ಪೋಷಕರು ಸಹ ಚಟುವಟಿಕೆ ಮಾಡುವುದರ ಮೂಲಕ ಮಗುವಿನಲ್ಲಿರುವ ನ್ಯೂನ್ಯತೆಯನ್ನು ಸ್ವಲ್ಪ ಮಟ್ಟಿಗೆ ಆದರೂ ಕಡಿಮೆ ಮಾಡಬಹುದು. ಹುಸೇನ ಅವರು ಮಕ್ಕಳ ಅಳತೆಯನ್ನು ತೆಗೆದುಕೊಳ್ಳುವ ಮೂಲಕ ಹಾಗೂ ಬೆಳವಣಿಗೆ ಕುಂಠಿತವಿರುವ ಮಕ್ಕಳು ಯಾವ ಹಂತದಲ್ಲಿದ್ದಾರೆ ಮತ್ತು ಅವರಿಗೆ ಯಾವ ಚಟುವಟಿಕೆ ಮಾಡುವುದರ

## ಆಶಾ ಮತ್ತು ಪಿ,ಎಚ್,ಸಿ,ಓ ಅವರಿಗೆ ತರಬೇತಿ ಕಾರ್ಯಕ್ರಮ

ಬೆಳವಣಿಗೆ ಕುಂಠಿತ ಮಕ್ಕಳನ್ನು ಸಾಮಾನ್ಯ ಮಕ್ಕಳಂತೆ ಪಾಲನೆ ಮಾಡುವುದು ತುಂಬಾ ಅವಶ್ಯಕವಾಗಿದೆ. ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಸೂಕ್ತವಾದ ಚಟುವಟಿಕೆಗಳನ್ನು ಮಾಡಿಸುವುದರಿಂದ ಮಕ್ಕಳಲ್ಲಿರುವಂತಹ ನ್ಯೂನ್ಯತೆಯ ಪ್ರಾಮಾಣ ಕಡಿಮೆ ಮಾಡಬಹುದು ಹಾಗೂ ಇಂತಹ ಮಕ್ಕಳಿಗೆ ಕುಟುಂಬದಲ್ಲಿಯೇ ಚಟುವಟಿಕೆ ಕಾರ್ಯಗಳು ಪ್ರಾರಂಭವಾಗಬೇಕು ಎಂದು ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಯೋಜನ ನಿರ್ವಾಹಣಅಧಿಕಾರಿ ಸದಾನಂದ ಅಭಿಪ್ರಾಯ ತಿಳಿಸಿದರು. ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಗುರುತಿಸುವ ಕಾರ್ಯ ಸಮುದಾಯದ ಮೂಲಕ ಆಗಬೇಕು, ಮಕ್ಕಳ ನ್ಯೂನ್ಯತೆ ಗುರುತಿಸಿ ಸೂಕ್ತವಾದ ಚಟುವಟಿಕೆ ಮಾಡುವುದರಿಂದ ಮಕ್ಕಳಲ್ಲಿ ಬದಲಾವಣೆ ಕಾಣಬಹುದು. ಇದರಲ್ಲಿ ಪೋಷಕರ ಪಾತ್ರ ತುಂಬಾ ಮುಖ್ಯವಾಗಿರುತ್ತದೆ. ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಕಲಬುರಗಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಸೇವೆ ನೀಡುತ್ತಿದೆ.





| ಕ್ರಮ ಸಂಖ್ಯೆ | ಚಟುವಟಿಕೆಗಳು | ಸಂಖ್ಯೆ |
|---|---|---|
| 1 | ಯು.ಡಿ.ಐ.ಡಿ ಕಾರ್ಡ ಅರ್ಜಿ | 14 |
| 2 | ವೈದ್ಯರ ಸಲಹೆ | 09 |
| 3 | ರೇಷನ್ ಕಾರ್ಡ(ಪಡಿತರ ಚೀಟಿ) | 01 |
| 4 | ಯು.ಡಿ.ಐ.ಡಿ ಕಾರ್ಡ ಸ್ವೀಕರಿಸಲಾಗಿದೆ | 04 |
| 5 | ಆಧಾರ ಕಾರ್ಡ ಅರ್ಜಿ | 02 |
| 6 | ಪಿಂಚಣಿ ಅರ್ಜಿ | 02 |
| 7 | ಬ್ಯಾಂಕ್ ಖಾತೆ | 01 |

# ಉಜ್ಜೀವನ ಕಾರ್ಯಕ್ರಮ



ಕಲಬುರಗಿ ಜಿಲ್ಲೆಯ ನಂದೂರ (ಕೆ) ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಅಡಿಯಲ್ಲಿ ಮೈರಾಡ ಸಂಸ್ಥೆಯ ಸಹಯೋಗದೊಂದಿಗೆ ಕಲಬುರಗಿ ಜಿಲ್ಲೆಯ ನಂದೂರ (ಕೆ) ಗ್ರಾಮದ ದಿನಾಂಕ 24.5.2023 ರಂದು ಬಡ ರೈತರಿಗೆ ಉಚಿತವಾಗಿ 8,000 ಬೆಲೆ ಬಾಲುವ 4 ಜನ ರೈತರಿಗೆ ತಾಡ ಪತ್ರಿಯನ್ನು ಕೊಡಸಲಾಗಿದೆ.



22.05.2023 ರಂದು ಕಲಬುರಗಿ ಜಿಲ್ಲೆಯ ಧರ್ಮಾಪೂರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೋಜಕರು ಮತ್ತು ಕಾರ್ಯಕರ್ತರು ಮಹಿಳಾ ಸ್ವ-ಸಹಾಯ ಸಂಘಕ್ಕೆ ಭೇಟಿ ಮಾಡಿ ಅವರಿಗೆ ಸ್ವ-ಉದ್ಯೋಗವನ್ನು ಮಾಡುವಂತೆ ಮಾಹಿತಿ ಕಾರ್ಯಕ್ರಮವನ್ನು ಮಾಡಲಾಯಿತ್ತು. ಮಾಹಿತಿ ಪಡೆದುಕೊಂಡು 10 ಜನ ಮಹಿಳೆಯರು ಸಂಘದಿಂದ ಲೋನ್ ಪಡೆದುಕೊಂಡು ಶಾವಿಗೆ ಮಷಿನ್ ಖರಿದಿಸಿ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇವರು 1ಕೆ.ಜಿ ಶಾವಿಗೆ ಮಾಡಲು 40 ರೂಪಾಯಿಯನ್ನು ತೆಗೆದುಕೋಳ್ಳುತ್ತಿದ್ದಾರೆ, ಈಗ ಇವರು ಒಂದು ತಿಂಗಳಲ್ಲಿ 16,000 ರೂಪಾಯಿ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಸ್ವ-ಉದ್ಯೋಗ ಕುರಿತು ಮಾಹಿತಿ ನೀಡಿ ನಮಗೆ ಸ್ವ-ಉದ್ಯೋಗ ಮಾಡಲು ಪ್ರೋತ್ಸಾಹಿಸಿದ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದರು.



ದಿನಾಂಕ 20.05.2023 ರಂದು ಕಲಬುರಗಿ ಜಿಲ್ಲೆಯ ತಿಳಗೂಳ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಕಾರಿತಾಸ ಇಂಡಿಯ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಬಡ ಕುಟುಂಬದ ರೈತರಿಗೆ ಮತ್ತು ಮಹಿಳೆಯರಿಗೆ, ಒಟ್ಟು 20 ಜನರಿಗೆ 4 ದಿನ ಬದು ನಿರ್ಮಾಣದ ಕೆಲಸ ಒದಗಿಸಲಾಯಿತ್ತು. ಈ ಕೆಲಸದಿಂದ ಒಬ್ಬರಿಗೆ ದಿನಕ್ಕೆ 350 ರೂ. ಸಿಗುತ್ತಿತ್ತು ಒಟ್ಟಾಗಿ 4 ದಿನಕ್ಕೆ 20 ಜನರಿಗೆ 28,000 ಲಾಭ ದೊರಕಿದೆ.



# ಯಶಸ್ವಿ ಕಥೆ



**ಮಗುವಿನ ಹೆಸರು : ಎಮ್.ಡಿ.ಸುಲ್ತಾನ**
**ತಂದೆಯ ಹೆಸರು : ಎಮ್.ಡಿ.ಜಾಕೀರ್**
**ತಾಯಿಯ ಹೆಸರು : ಜಬೀನಾ**
**ಮಗುವಿನ ವಯಸ್ಸು : 6 ವರ್ಷ**
**ಸ್ಥಳ : ಏಕಬಾಲ ಕಾಲೋನಿ**
**ಜಾತಿ : ಮುಸ್ಲಿಂ**
**ವಿಕಲತೆ : ಸಿ,ಪಿ**
**ಪತ್ತೆ ಹಚ್ಚಿದ ದಿನಾಂಕ : 08–06–2019**

## ಕುಟುಂಬದ ಹಿನ್ನೆಲೆ:

ಎಮ್.ಡಿ.ಸುಲ್ತಾನ 06 ವರ್ಷದ ಮಗುವಾಗಿದು. ಮಗುವಿನ ತಂದೆ ಕೂಲಿ ಕೆಲಸವನ್ನು ಮಾಡುತ್ತಾನೆ. ತಾಯಿ ಗೃಹಣಿಯಾಗಿದ್ದಾಳೆ ಮಗುವಿನ ಮನೆಯಲ್ಲಿ ಒಟ್ಟು 6 ಜನರು ಸದಸ್ಯರು ಇದ್ದಾರೆ. ಇವರಿಗೆ ಎರಡು ಮಕ್ಕಳು ಇವರ ಮನೆಯನ್ನು ತಂದೆ ಒಬ್ಬರೆ ಕೆಲಸ ಮಾಡಿ ತಮ್ಮ ಕುಟುಂಬವನ್ನು ಸಾಕುತಿದ್ದಾರೆ.

## ಮಗುವಿನ ಮೂಲ ಸಮಸ್ಯೆ

ಮಗು ಜನಿಸುವಾಗ 2 ಮಕ್ಕಳ ಜನನವಾಯಿತು. ಮೊದಲ ಮಗು ಮಗು ಸಹಜವಾಗಿದೆ 2ನೇ ಮಗು ಎಮ್.ಡಿ.ಸುಲ್ತಾನ ಸಿ.ಪಿ.ಯಾಗಿ ಜನಿಸಿತ್ತು, ಮಗುವಿಗೆ ಯಾವುದೇ ಚಲನ ವಲನ ಇರಲಿಲ್ಲ ಹಾಸಿಗೆ ಮೇಲೆ ಮಲಗಿತುತ್ತಿತ್ತು ಕತ್ತು ನಿಂತಿರಿಲಿಲ್ಲ ಮನೆಯ ಸದಸ್ಯರನ್ನು ಗುರುತಿಸುತಿರಲಿಲ್ಲ, ಕಣ್ಣು ಕಾಣುವುದಿಲ್ಲ,

## ಮಗುವಿಗೆ ನೀಡಿದ ಚಟುವಟಿಕೆ :

ಈ ಮಗುವಿಗೆ ಮೋದಲು ಎನ್,ಆರ್,ಸಿ ಗೆ ರೇಪರ ಮಾಡಲಾಯಿತು. ನಂತರ ಹೆಡ್ ಕಂಟ್ರೂಲ ಚಟುವಟಿಕೆ ಮಾಡಲಾಯಿತು. ರೋಲಿಂಗ್ ಚಟುವಟಿಕೆ, ವಾಕ್ ಚಟುವಟಿಕೆ ಕುಳಿತುಕೋಳ್ಳುವ ಚಟುವಟಿಕೆ, ನಡೆಯುವ ಚಟುವಟಿಕೆಯನ್ನು ಮಾಡಲಯಿತು. ಸ್ಪೀಚ್ ಥೇರೆಪಿ ಚಟುವಟಿಕೆ ಮಾಡಲಾಯಿತು.

## ಮಗುವಿನಲ್ಲಿಯಾದ ಬದಲಾವಣೆ :

ಮಗುವಿಗೆ ಹೆಡ್ ಕಂಟ್ರೋಲ್ ಆಗಿದೆ ಕುಳಿತುಕೋಳ್ಳುತ್ತಾನೆ, ನಡೆಯುತ್ತಾನೆ ಮಾತನಾಡುತ್ತಾನೆ ಮನೆ ಸದಸ್ಯರನ್ನು ಗುರುತಿಸುತ್ತಾನೆ ಮತ್ತು ಅವರ ಹೆಸರುಗಳನ್ನು ಕರೆಯುತ್ತಾನೆ, ಅಂಗನವಾಡಿ ಹೋಗುತ್ತಾನೆ ಸ್ವಂತಹ ತಾನೇ ಊಟ ಮಾಡುತ್ತಾನೆ.

# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಸೇವಾ ಸಂಗಮ ಸಂಸ್ಥೆ ಕಾರ್ಯ

ಸಂಯುಕ್ತ ಕರ್ನಾಟಕ



ಕಲಬುರಗಿಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಆಶಾ ಕಾರ್ಯಕರ್ತೆಹಾಗೂ ಪಿಎಚ್‌ಸಿಓ ಅವರಿಗೆ ತರಬೇತಿ ನೀಡಲಾಯಿತು.

## ಆಶಾ ಕಾರ್ಯಕರ್ತೆಯರ ಕಾರ್ಯ ಶ್ಲಾಘನೆ

**ಸಂ.ಕ. ಸಮಾಚಾರ ಕಲಬುರಗಿ:** ಬೆಳವಣಿಗೆ ಕುಂಠಿತ ಮಕ್ಕಳನ್ನು ಸಾಮಾನ್ಯ ಮಕ್ಕಳಂತೆ ಪಾಲನೆ ಮಾಡುವುದು ತುಂಬಾ ಅವಶ್ಯಕವಾಗಿದೆ. ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಸೂಕ್ತವಾದ ಚಟುವಟಿಕೆಗಳನ್ನು ಮಾಡಿಸುವುದರಿಂದ ಮಕ್ಕಳಲ್ಲಿರುವಂತಹ ನ್ಯೂನ್ಯತೆಯ ಪ್ರಾಮಾಣ ಕಡಿಮೆ ಮಾಡಬಹುದು ಎಂದು ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಯೋಜನ ನಿರ್ವಹಣಾ ಅಧಿಕಾರಿ ಸದಾನಂದ ಅಭಿಪ್ರಾಯ ತಿಳಿಸಿದರು.

ನಗರದ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಸಭಾಂಗಣದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಷನ ಸಹಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಡಿ ಆಶಾ ಕಾರ್ಯಕರ್ತೆಯರಿಗೆ ಮತ್ತು ಪಿ.ಎಚ್.ಸಿ.ಓ ರವರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಖಾಜಾ ಹುಸೇನ ಮಾತನಾಡಿದರು. ಬ್ರದರ್ ಮ್ಯಾಥು, ಎಲ್.ಎಚ್.ವಿ ಮೇಲ್ವಿಚಾರಕಿಯಾದ ನಿರ್ಮಲಾದೇವಿ, ಶೋಭಾ ಭಾಗವಹಿಸಿದರು. 65 ಆಶಾ ಕಾರ್ಯಕರ್ತೆಯರು ಮತ್ತು ಪಿ.ಎಚ್.ಸಿ.ಓ ಭಾಗವಹಿಸಿದರು. ಜಗದೇವಿ ಸ್ವಾಗತಿಸಿ, ಲಕ್ಷ್ಮೀ ವಂದಿಸಿ ಶಿವಕಾಂತ ನಿರೂಪಿಸಿದರು.

Kalaburgi Edition
May 23, 2023 Page No. 02
Powered by : eReleGo.com

## ಆಶಾ ಕಾರ್ಯಕರ್ತೆಯರ ಕಾರ್ಯ ಸ್ಲಾಂಘನಿಯ



ಕಲಬುರಗಿ,ಮೇ.23–ಬೆಳವಣಿಗೆ ಕುಂಠಿತ ಮಕ್ಕಳನ್ನು ಸಾಮಾನ್ಯ ಮಕ್ಕಳಂತೆ ಪಾಲನೆ ಮಾಡುವುದು ತುಂಬಾ ಅವಶ್ಯಕವಾಗಿದೆ. ಅಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಸೂಕ್ತವಾದ ಚಟುವಟಿಕೆಗಳನ್ನು



ಮಾಡಿಸುವುದರಿಂದ ಮಕ್ಕಳಲ್ಲಿರುವಂತಹ ನ್ಯೂನ್ಯತೆಯ ಪ್ರಾಮಾಣ ಕಡಿಮೆ ಮಾಡಬಹುದು ಹಾಗೂ ಇಂತಹ ಮಕ್ಕಳಿಗೆ ಕುಟುಂಬದಲ್ಲಿಯೇ ಚಟುವಟಿಕೆ ಕಾರ್ಯಗಳು ಪ್ರಾರಂಭವಾಗಬೇಕು ಎಂದು ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಯೋಜನ ನಿರ್ವಹಣಾಅಧಿಕಾರಿ ಸದಾನಂದ ಅಭಿಪ್ರಾಯ ತಿಳಿಸಿದರು.

ನಗರದ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಸಭಾಂಗಣದಲಿಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಪೌಂಡೇಷನಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಮತ್ತು ಪಿ.ಎಚ್.ಸಿ.ಓ ರವರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಗುರುತಿಸುವ ಕಾರ್ಯ ಸಮುದಾಯದ ಮೂಲಕ ಆಗಬೇಕು. ಮಕ್ಕಳ ನ್ಯೂನ್ಯತೆ ಗುರುತಿಸಿ ಸೂಕ್ತವಾದ ಚಟುವಟಿಕೆ ಮಾಡುವುದರಿಂದ ಮಕ್ಕಳಲ್ಲಿ ಬದಲಾವಣೆ ಕಾಣಬಹುದು. ಇದರಲ್ಲಿ ಪೋಷಕರಪಾತ್ರ ತುಂಬಾ ಮುಖ್ಯವಾಗಿರುತ್ತದೆ. ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಕಲಬುರಗಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಸೇವೆ ನೀಡುತ್ತಿದೆ.

ಖಾಜಾ ಹುಸೇನ ಮಾತನಾಡುತ್ತಾ 2016ರ ಕಾಯ್ದೆಯ ಬಗ್ಗೆ ವಿವರಿಸುತ್ತಾ ಗರ್ಭಿಣಿಯರು ಉತ್ತಮ ಪೌಷ್ಟಿಕ ಆಹಾರ, ಸಮಯಕ್ಕೆ ಸರಿಯಾಗಿ ಆರೋಗ್ಯ ತಪಾಸಣೆಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಅಂಗವಿಕಲತೆ ಬರುವುದಕ್ಕೆ ಯಾವೇಲ್ಲಾ ಕಾರಣಗಳಿವೆ ಎಂದು ತಿಳಿಸುತ್ತಾ ಮಕ್ಕಳಿಗೆ ಪೌಷ್ಟಿಕ ಆಹಾರ ಆರೋಗ್ಯ ತಪಾಸಣೆ ಸರಿಯಾದ ಸಮಯಕ್ಕೆ ದೊರಿಯುವ ಹಾಗೆ ನೋಡಿಕೊಳ್ಳಬೇಕು. ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಸಾಮಾನ್ಯರಂತೆ ಕಾಣಬೇಕು. ಸಭೆ ಸಮಾರಂಭದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಬೇಕು. ವಿಕಲಚೇತನರಿಗೆ ಸಮಾಜದಲ್ಲಿ ಒಳ್ಳೆಯ ಗೌರವ ದೊರಿಯುವ ಹಾಗೆ ಸಮುದಾಯದ ಜನರ ಜವಾಬ್ದಾರಿಯಾಗಿರಬೇಕು.

ಕಾರ್ಯಕ್ರಮದಲ್ಲಿ ಬ್ರದರ್ ಮ್ಯಾಥು, ಎಲ್.ಎಚ್.ವಿ ಮೇಲ್ವಿಚಾರಕಿಯಾದ ನಿರ್ಮಲಾದೇವಿ, ಶೋಭಾ ಭಾಗವಹಿಸಿದರು. ಕಲಬುರಗಿ ನಗರ ಮತ್ತು ಗ್ರಾಮೀಣ ಭಾಗದ 65 ಆಶಾ ಕಾರ್ಯಕರ್ತೆಯರು ಮತ್ತು ಪಿ.ಎಚ್.ಸಿ.ಓ ಭಾಗವಹಿಸಿದರು. ಸೇವಾ ಸಂಗಮ ಸಂಸ್ಥೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದರು. ಶ್ರೀಮತಿ ಜಗದೇವಿ ಸ್ವಾಗತಿಸಿ, ಲಕ್ಷ್ಮೀ ವಂದಿಸಿ ಶಿವಕಾಂತ ನಿರೂಪಿಸಿದರು.

## ಬೆಳವಣಿಗೆ ಕುಂಠಿತ ಮಕ್ಕಳ ಪಾಲನೆ ಅವಶ್ಯ

■ ವಿಕ ಸುದ್ದಿಲೋಕ ಕಲಬುರಗಿ



ನಗರದ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಸಭಾಂಗಣದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮ ನಡೆಯಿತು.

ಬ್ರದರ್ ಮ್ಯಾಥು, ನಿರ್ಮಲಾದೇವಿ, ಶೋಭಾ, ನಗರ ಮತ್ತು ಗ್ರಾಮೀಣ ಭಾಗದ 65 ಆಶಾ ಕಾರ್ಯಕರ್ತೆಯರು ಮತ್ತು ಪಿಎಚ್‌ಸಿಓ ಸೇವಾ ಸಂಗಮ ಸಂಸ್ಥೆ ಸಿಬ್ಬಂದಿ ಭಾಗವಹಿಸಿದ್ದರು. ಜಗದೇವಿ ಸ್ವಾಗತಿಸಿದರು. ಶಿವಕಾಂತ ನಿರೂಪಿಸಿದರು. ಲಕ್ಷ್ಮಿ ವಂದಿಸಿದರು.

# Organization of Bidar Integral Transformation (ORBIT)



# APPEAL

## *Remove 'DIS' From DISABLE*

(Only for Indian citizens)

**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

## *Sponsor a Child with Rs. 500 per Month /6000 per Year.*

*Our goal is to "Focus on what children can do, their abilities, rather than their disability."*

## ACTION PLANS :

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**

**ADDRESS**

ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT

Note : Please WhatsApp your address to the above given number after sending money.

## ‘For it is in giving we receive’

*St. Francis Assisi*

| Name of the donor | Address |
|---|---|
| The Karnataka Jesuit Educational Society | Bengalore |

